


# ಸಮರ್ಥ ನಾಯಕನಲ್ಲಿರಬೇಕಾದ ಗುಣಗಳು

ಹಳೇಕೋಟೆ ರಮೇಶ

*ಆಡಳಿತ ನಿರ್ವಹಣೆ ಒಂದು ಕಲೆ. ಇದರಲ್ಲಿ ನೈಪುಣ್ಯತೆಯನ್ನು ಪಡೆದವನೇ ಸಮರ್ಥ ನಾಯಕನಾಗಬಲ್ಲ. ಇದಕ್ಕೆ ತರಬೇತಿ ಮತ್ತು ಅನುಭವ ಎರಡೂ ಬೇಕಾಗುತ್ತದೆ. ಸಮರ್ಥ ನಾಯಕನಾರೆಂಬುದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಹೇಳಲಾಗಿದೆ. ಮಾನ್ಯ ಲೇಖಕರು ಮೂಡಿಗೆರೆಯ ನಿವಾಸಿಗಳಾದ ಕೃಷಿಕರು.*

ಸಮರ್ಥ ನಾಯಕತ್ವ ಯಾವುದೇ ಸಮಾಜಸೇವಾ ಸಂಘ ಸಂಸ್ಥೆಯ ಸಮಗ್ರ ಅಭಿವೃದ್ಧಿಗೆ ಆವಶ್ಯಕ ಎಂಬ ವಿಚಾರ ವಿವಾದಾತೀತವಾದುದು. ಉತ್ತಮ ನಾಯಕನಿಲ್ಲದ ಸಂಸ್ಥೆಯನ್ನು ನಾವಿಕನಿಲ್ಲದ ನಾವೆಯಂತೆ ಅಥವಾ ಹಾಯಿ ಇಲ್ಲದ ಹಡಗಿನಂತೆ ಎಂದು ಹೇಳಬಹುದು. ಇದನ್ನು ಬಹುತೇಕ ಜನ ಖಂಡಿತವಾಗಿಯೂ ಒಪ್ಪಿಕೊಳ್ಳುತ್ತಾರೆ. ಆದರೆ ಇಂದಿನ ದಿನಗಳಲ್ಲಿ ಹುಟ್ಟಿನಿಂದ ನಾಯಕತ್ವದ ಗುಣಗಳನ್ನು ಪಡೆದಿರುವ ವ್ಯಕ್ತಿಗಳು ವಿರಳವಾಗುತ್ತಿದ್ದಾರೆ. ಇಂದಿನ ಸಂಘಸಂಸ್ಥೆಗಳ ವ್ಯವಸ್ಥೆಯ ಚೌಕಟ್ಟಿನೊಳಗಡೆ ವ್ಯಕ್ತಿತ್ವ, ಧೈರ್ಯಶಾಲಿತ್ವ ಮತ್ತು ಗುಣಗ್ರಾಹಿತ್ವಗಳ ವೈವಿಧ್ಯಮಯವಾದ ಮೂಸೆಯಲ್ಲಿ ಪಳಗಿ ತಯಾರಾದ ನಾಯಕರನ್ನು ನಾವು ಕಾಣಬಹುದಾಗಿದೆ. ಅಂದರೆ ಇಂದಿನ ದಿನಗಳಲ್ಲಿ ಹುಟ್ಟಿನಿಂದ ನಾಯಕತ್ವದ ಗುಣ ಹೊಂದಿರುವವರು ವಿರಳ, ಬದಲಾಗಿ ತರಬೇತಾದ ನಾಯಕರನ್ನು ನಾವು ಕಾಣುತ್ತಿದ್ದೇವೆ.

ನಿಜವಾದ ನಾಯಕತ್ವದ ಗುಣಗಳಿಲ್ಲದ ವ್ಯಕ್ತಿಗಳು ಅವರು ಪ್ರತಿನಿಧಿಸುತ್ತಿರುವ ಸಂಸ್ಥೆಯ ಅಭಿವೃದ್ಧಿಗೆ ಅಪಾಯಕಾರಿಯಾಗುತ್ತಾರೆ. ಸಂಸ್ಥೆಯ ಪ್ರಗತಿ ಅಥವಾ ವಿನಾಶಕ್ಕೆ ನಾಯಕನಲ್ಲಿರುವ ಗುಣ ನ್ಯೂನತೆಗಳೇ ಕಾರಣವಾಗಿರುತ್ತವೆ. ಒಬ್ಬ ಯಶಸ್ವೀ ನಾಯಕನಾಗಿ ಗುರುತಿಸಲ್ಪಡಬೇಕಾದವನು, ಸೂಕ್ಷ್ಮಮತಿಯುಳ್ಳವನೂ ಉತ್ತಮ ಕೆಲಸಗಾರನೂ ಆಗಿರಬೇಕಲ್ಲದೇ, ಒಳ್ಳೆಯ ಗುಣಾತ್ಮಕ ಅಂಶಗಳನ್ನು ಒಳಗೊಂಡ ಮತ್ತು ಸತ್ಪ್ರೇರಣೆಯನ್ನು ನೀಡುವ ಕಾರ್ಯಗಳನ್ನು ನಿರ್ವಹಿಸಬೇಕು.

ಎಮರ್ಸನ್ ಎಂಬಾತನ ಅಭಿಪ್ರಾಯದಂತೆ, "ನಾನು ಭೇಟಿ ಮಾಡುವ ಪ್ರತಿಯೊಬ್ಬ ವ್ಯಕ್ತಿಯೂ ಒಂದಿಲ್ಲೊಂದು ವಿಧದಲ್ಲಿ ನನಗಿಂತ ಮಿಗಿಲಾದವನು" ಎಂಬ ಭಾವನೆ ನಮ್ಮಲ್ಲಿ ಹುದುಗಿರಬೇಕು ಮಾತ್ರವಲ್ಲ ಯಾವತ್ತೂ ನಾವು ಇನ್ನೊಬ್ಬರಿಂದ ಕಲಿತುಕೊಳ್ಳಬೇಕಾದುದು ಬಹಳಷ್ಟಿದೆ ಎಂಬ ಪ್ರಜ್ಞೆ ನಮ್ಮಲ್ಲಿರಬೇಕು. ವಯೋಮಾನದ ಪ್ರಭೇದವಿಲ್ಲದೆ ಎಲ್ಲರಿಂದಲೂ ನಾವು ತಿಳಿದುಕೊಳ್ಳಬೇಕಾದ ವಿಚಾರಗಳು ಬಹಳಷ್ಟಿರುತ್ತವೆ. ಸಂಕ್ಷಿಪ್ತವಾಗಿ ಹೇಳಬೇಕಾದರೆ ಆಡಳಿತ ನಿರ್ವಹಣೆ ಮತ್ತು ನಾಯಕತ್ವ ವಹಿಸುವ ವಿಚಾರದಲ್ಲಿ ಅಗತ್ಯವಾಗಿ ಪಾಲಿಸಬೇಕಾದ್ದನ್ನು ನಾವು ಎಲ್ಲರಿಂದಲೂ ಕಲಿಯಬಹುದಾಗಿದೆ. ಅಂತೆಯೇ ಕೆಲವರಿಂದ ನಾವು ಏನನ್ನು ಮಾಡಬಾರದು ಎಂಬ ಅಂಶಗಳನ್ನು ಕೂಡ ಕಲಿಯಬೇಕು. ಹಾಗಿದ್ದಲ್ಲಿ ಮಾತ್ರ ನಾವು ನಮ್ಮೊಳಗಿನ ನಿಜವಾದ ನಾಯಕ ಹೊರಹೊಮ್ಮುವಂತೆ ಮಾಡಬಹುದು.

**ನಿಮ್ಮಲ್ಲಿ ಅಸೂಯೆ ಅಥವಾ ಸ್ವಾರ್ಥತೆಯ ಗಂಧವೂ ಇರಬಾರದು, ಆಗ ನೀವು ನಾಯಕರಾಗಬಲ್ಲಿರಿ.** —ಸ್ವಾಮಿ ವಿವೇಕಾನಂದ.

ನಿಮ್ಮ ಸುತ್ತಮುತ್ತಲ ಜನರೊಂದಿಗೆ ಪ್ರೀತಿ, ವಿಶ್ವಾಸ, ಸೌಹಾರ್ದತೆ ಬೆಳೆಸಿಕೊಳ್ಳಿ. ಅವರೊಂದಿಗೆ ನಿಮ್ಮ ಅಹಂಕಾರ ತೋರದೆ ಮಾತನಾಡಿರಿ, ಅವರ ಅಹವಾಲುಗಳನ್ನು ಕೇಳುವ ತಾಳ್ಮೆಯಿರಿಸಿಕೊಳ್ಳಿ. ಎಲ್ಲಕ್ಕಿಂತ ಮಿಗಿಲಾಗಿ ಅವರು ನಿಮ್ಮ ಬಗ್ಗೆ ಗೌರವ ಭಾವನೆ ಇರಿಸುವಂತೆ ವ್ಯವಹರಿಸಿ. ನಿಮ್ಮೊಂದಿಗೆ ವ್ಯವಹರಿಸುವ ಜನರಿಗೆ ಅವರ ಸ್ವ-ಸಾಮರ್ಥ್ಯವನ್ನು ಪೂರ್ಣವಾಗಿ ಬಳಸಿಕೊಂಡು ಹೇಗೆ ಅತ್ಯುತ್ತಮ ಫಲಿತಾಂಶ ಪಡೆಯಬಹುದೆನ್ನುವುದನ್ನು ಮನದಟ್ಟು ಮಾಡಿಕೊಳ್ಳಿ. ಫೀಲ್ಡ್ ಮಾರ್ಷಲ್ ಮಾಂಟ್ಗೊಮೇರಿ ಹೇಳುವಂತೆ, "ಒಬ್ಬ ನಾಯಕ ನಿಚ್ಚಳವಾದ ಆಶಾವಾದಿಯಾಗಿರಬೇಕು." ಆತ ಜನರಲ್ಲಿ ಭರವಸೆ ಮತ್ತು ಹುಮ್ಮಸ್ಸನ್ನು ಸದಾ ತುಂಬುತ್ತಿರಬೇಕು.

ನೀವು ನಿಮ್ಮ ವ್ಯಕ್ತಿತ್ವವನ್ನು ಇದೇ ರೀತಿಯಲ್ಲಿ ರೂಪಿಸಿಕೊಂಡಲ್ಲಿ ಇತರರ ಸಾಮರ್ಥ್ಯವನ್ನು ಹೊರತೆಗೆಯಬಲ್ಲಿರಿ ಮತ್ತು ನಿಮ್ಮ ನಿಜವಾದ ನಾಯಕತ್ವದ ಗುಣಗಳನ್ನು ರೂಪಿಸಬಲ್ಲಿರಿ. ನಿಮ್ಮ ವ್ಯಕ್ತಿತ್ವ ಮತ್ತು ಸ್ಫೂರ್ತಿಯುತ ವ್ಯವಹಾರದಿಂದ ಏನನ್ನೂ ಸಾಧಿಸಬಹುದಾಗಿದೆ. ಖ್ಯಾತ ಉರ್ದು ಕವಿ ಇಕ್ಬಾಲ್ ಹೇಳುವಂತೆ, "ನೀನು ನಿನ್ನ ಸ್ವಯಂ ವ್ಯಕ್ತಿತ್ವವನ್ನು ಸ್ವಚ್ಛ ಮತ್ತು ಗೌರವಯುತವಾಗಿರಿಸಿಕೊಳ್ಳುವ ಮೂಲಕ ಆ ದಯಾಮಯನಾದ ದೇವರನ್ನು ಮೆಚ್ಚಿಸಿ, ಆ ದೇವರೂ ಕೂಡ ಸ್ವತಃ ನಿನ್ನ ಮುಂದೆ ನಿಂತು ಏನು ಮಾಡಬೇಕು ಮಗನೇ ಎಂದು ಕೇಳುವಷ್ಟು ಸಾಧನೆ ಮಾಡಬಹುದಾಗಿದೆ."

ನಿಮ್ಮ ಮುಂದಿರುವ ಹೊಣೆಗಾರಿಕೆಗಳಿಂದ ಯಾವತ್ತೂ ತಪ್ಪಿಸಿಕೊಳ್ಳದಿರಿ. ಅವುಗಳನ್ನು ಸ್ವಾಗತಿಸಿ ನಿಮ್ಮ ಮುಂದಿರುವ ಸವಾಲುಗಳನ್ನು ಗೌರವಯುತವಾಗಿ ಪಾರಿತೋಷಕವೆಂಬಂತೆ

ಸ್ವೀಕರಿಸಿ. ನಿಮ್ಮ ವ್ಯಕ್ತಿತ್ವದ ಮೌಲ್ಯವನ್ನು ತೋರ್ಪಡಿಸಲು ಇದೊಂದು ಅವಕಾಶ ಎಂಬುದನ್ನು ಮರೆಯದಿರಿ. ಇಲ್ಲದಿದ್ದರೆ ವಜ್ರಸಮನಾದ ನಿಮ್ಮ ವ್ಯಕ್ತಿತ್ವಕ್ಕೆ ಮೆರಗುಬಾರದು, ನಿಮ್ಮ ವ್ಯಕ್ತಿತ್ವ ಎಲೆಮರೆಯ ಕಾಯಂತೆ ಮರೆಯಾಗಬಹುದು ಅಥವಾ ಧೂಳು ಹಿಡಿದು ಮಸುಕಾದಂತಾಗಬಹುದು. ನೆನಪಿಡಿ, ಅನೇಕ ಜವಾಬ್ದಾರಿಗಳ ಮತ್ತು ಸವಾಲುಗಳ ಸರಮಾಲೆಯೇ ಯಾವನ ಮುಂದಿಹುದೋ ಅಂತಹವರಿಗೆ ಪ್ರಜ್ವಲಿಸುವ ವ್ಯಕ್ತಿತ್ವವನ್ನು ತೋರ್ಪಡಿಸುವ ಅವಕಾಶಗಳು ಖಂಡಿತವಾಗಿ ವಿಪುಲ. ನಿಮ್ಮ ನಿಜವಾದ ವ್ಯಕ್ತಿತ್ವ ಮತ್ತು ಸಾಮರ್ಥ್ಯವನ್ನು ಹೊರಗೆಡಹಿರಿ.

**ರಾಜರ ಯಶಸ್ಸಿಗೆ ಸತ್ಯದಷ್ಟು ಕೊಡುಗೆಯನ್ನು ನೀಡುವುದು ಮತ್ತಾವುದೂ ಇಲ್ಲ. ಸತ್ಯದಷ್ಟು ಮತ್ತಾವುದೂ ಅವರಲ್ಲಿ ಭರವಸೆಯನ್ನು ಮೂಡಿಸುವುದಿಲ್ಲ.** *—ಮಹಾಭಾರತ.*

ತೊಂದರೆಗಳನ್ನು ಮುಚ್ಚಿಹಾಕಲು ಯತ್ನಿಸದಿರಿ, ಅವುಗಳನ್ನು ಎದುರಿಸಿ. ತೊಂದರೆಗಳಿಂದ ವಿಮುಖರಾಗಲು ಯತ್ನಿಸದಿರಿ, ಅವುಗಳನ್ನು ಪರಿಹರಿಸಲು ಮುಂದಾಗಿ. ಯಾವುದೇ ಕೆಲಸ ಪರಿಪೂರ್ಣವಾಗಬೇಕಾದರೆ ನೀವು ಪರಿಪಕ್ವತೆಯೊಂದಿಗೆ ಕಾರ್ಯೋನ್ಮುಖರಾಗಬೇಕು. ತೊಂದರೆರಹಿತವಾದ ಜೀವನಾವಧಿಯನ್ನು ಪಡೆಯಬೇಕೆಂದರೆ ಅದೆಂದೂ ಸಾಧ್ಯವಿಲ್ಲ. ಒಂದು ವೇಳೆ ಇದು ಸಾಧ್ಯವಿದ್ದರೂ ನಿಮಗೆ ಜೀವನೋತ್ಸಾಹ ಖಂಡಿತ ಸಿಗದು. ಇಂತಹ ಪೇಲವ ಬದುಕನ್ನು ನೀವು ನಿರೀಕ್ಷಿಸುವುದಾದಲ್ಲಿ ನಿಮ್ಮ ಮರಣಾನಂತರ ಜನಮಾನಸದ ನೆನಪಿನಿಂದ ಬಹುಬೇಗ ಅಳಿದುಹೋಗುವಿರಿ. ಜನಮಾನಸದಲ್ಲಿ ಚಿರಕಾಲ ನೆನಪುಳಿಯುವಂತಹ ಕಾರ್ಯವೆಸಗಬೇಕು ಎಂಬ ಅಪೇಕ್ಷೆ ನಿಮಗಿಲ್ಲವೆ? ಸಮಸ್ಯೆಗಳನ್ನು ಎದುರಿಸುವ ಸವಾಲನ್ನು ಸ್ವೀಕರಿಸಿ, ನೀವು ಖಂಡಿತ ಜಯಶಾಲಿಯಾಗುವಿರಿ.

ಯಾವುದೇ ನಿರ್ಧಾರದಿಂದ ಹಿಂದೆ ಸರಿಯದಿರಿ. ನೀವು ಕೈಗೊಂಡ ನಿರ್ಧಾರಗಳಲ್ಲಿ ಶೇಕಡ ೧೦೦ ಜಯ ಸಿಗಬೇಕೆಂಬ ಆಶಾವಾದವನ್ನು ಎಂದೂ ಹೊಂದದಿರಿ. ಅದು ಖಂಡಿತ ಅಸಾಧ್ಯ. ನಿರ್ವಹಣೆಯು ಒಂದು ಪಂದ್ಯವಿದ್ದಂತೆ. ಒಂದು ಪಂದ್ಯದಲ್ಲಿ ಆಟಗಾರನ ಸಾಮರ್ಥ್ಯವನ್ನು ಅಳೆಯುವ ಮಾನದಂಡ ಸೋಲು-ಗೆಲುವಲ್ಲ. ಆತ ಎಷ್ಟು ಚೆನ್ನಾಗಿ ಆಡಿದ ಎಂಬುದು ಮುಖ್ಯ. ನೆನಪಿಡಿ, ನಿಮ್ಮ ಅಳತೆ ಮೀರಿದ ಆಶಾವಾದ ಮತ್ತು ಕಾತರತೆ ನಿಮ್ಮ ನಿಜ ಸಾಮರ್ಥ್ಯವನ್ನು ಧೃತಿಗೆಡಿಸುತ್ತದೆ. ಇದರಿಂದ ನಿಮ್ಮ ಕೈಯಲ್ಲಿರುವ ಕಾರ್ಯದ ನಿರ್ವಹಣೆಯಲ್ಲಿ ನಿಮ್ಮ ಪರಿಪೂರ್ಣತೆಗೂ ಧಕ್ಕೆ ಬರಬಹುದು. ಆದ್ದರಿಂದ ನಿಜವಾದ ನಾಯಕ ಯಶಸ್ವಿಯಾಗಬೇಕಾದಲ್ಲಿ ನೆನಪಿಡಬೇಕಾದುದು, "ಅಭ್ಯಸಿಸಿ ಅಭ್ಯುದಯವನ್ನು ಕಾಣಿರಿ" ಎಂಬುದಾಗಿದೆ.

ಒಬ್ಬ ನಾಯಕ ತನ್ನ ಸಂಸ್ಥೆಯ ಬಗ್ಗೆ ನಿಖರವಾದ ಮಾಹಿತಿ ಹೊಂದಿರಬೇಕು ಮತ್ತು ಮುನ್ನಡೆಯಬೇಕಾದ ಯೋಜನೆಗಳ ಬಗ್ಗೆ ಆಲೋಚನಾಪೂರ್ಣ ದೃಷ್ಟಿಕೋನ ಹೊಂದಿರಬೇಕು. ನಿಮ್ಮ ದೃಷ್ಟಿಕೋನ ಸ್ವಯಂ ಸ್ಫೂರ್ತಿಯಿಂದ ಹೊರಬರಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಧೈರ್ಯ ಮತ್ತು ದೃಢತೆಯನ್ನು ಮೈಗೂಡಿಸಿಕೊಳ್ಳುವುದರೊಂದಿಗೆ ನೀವು ಜನರ ಆತ್ಮಸ್ಥೈರ್ಯವನ್ನು ಮತ್ತು ಜವಾಬ್ದಾರಿಯ ಅರಿವನ್ನು ಹೆಚ್ಚಿಸಬಹುದು. ತರಬೇತಿ ಆಡಳಿತನಿರ್ವಹಣೆಯ ಮೂಲಮಂತ್ರ. ನಿಮ್ಮೊಂದಿಗಿರುವವರನ್ನು ಸಂಸ್ಥೆಯ ನಾಯಕತ್ವ ವಹಿಸುವಂತೆ ಪ್ರೇರೇಪಿಸಿ. ಕೇವಲ ಹುದ್ದೆಗಳ ಗಣನೆಯಲ್ಲದೆ ನಿಜವಾದ ಅರ್ಥದಲ್ಲಿ ನಾಯಕರನ್ನು ರೂಪುಗೊಳಿಸುವಲ್ಲಿ ಯಶಸ್ವಿಯಾಗಿ. ನೀವು ರೂಪಿಸುವ ನಾಯಕರೇ ನಿಮ್ಮ ಸ್ವಸಾಮರ್ಥ್ಯವನ್ನು ತೋರುವ ಕೈಗನ್ನಡಿ.

**"ಪೂರ್ಣನಮ್ರತೆಯೊಂದಿಗೆ ರಾಜನಂತಿರು"** ಎನ್ನುತ್ತಾರೆ **ಸ್ವಾಮಿ ವಿವೇಕಾನಂದರು. ಆತ್ಮವಿಶ್ವಾಸದಿಂದ ತಲೆಯೆತ್ತಿ, ನಮ್ರತೆಯಿಂದ ತಲೆಬಾಗಿ ನಡೆಯುವವನೇ ನಿಜವಾದ ನಾಯಕ. ಆತ್ಮವಿಶ್ವಾಸವುಳ್ಳವನು ಇತರರ ವಿಶ್ವಾಸವನ್ನೂ ಗಳಿಸಬಲ್ಲ, ಇತರರಲ್ಲಿಯೂ ವಿಶ್ವಾಸ ಇರಿಸಬಲ್ಲ ಮತ್ತು ಅವರ ಆತ್ಮವಿಶ್ವಾಸವನ್ನೂ ಕೆರಳಿಸಬಲ್ಲ. ಇವನೇ ನಿಜವಾದ ನಾಯಕ.**

ಕೊನೆಯದಾಗಿ ಒಂದು ಚೀನಿ ಗಾದೆಯನ್ನು ನೆನಪಿಡಿ : "ಬೆಟ್ಟ, ಗುಡ್ಡಗಳಲ್ಲಿ ಹರಿಯುತ್ತಿರುವ ನೀರಿನ ತೊರೆಗಳು ನದಿ ಸಮುದ್ರಗಳನ್ನೇ ಏಕೆ ಸೇರುತ್ತವೆಯೆಂದರೆ ನದಿ ಸಮುದ್ರಗಳು ಕೆಳಮಟ್ಟದಲ್ಲಿವೆ. ಅಂತೆಯೇ ನಿಜವಾದ ನಾಯಕನಾದವನು ಎಂದೂ ತಲಸ್ಪರ್ಶಿಯಾಗಿರಬೇಕು. ತಾನು ಇತರರಿಗಿಂತ ಎತ್ತರದಲ್ಲಿರಬೇಕೆಂಬ ಅಪೇಕ್ಷೆ ಹೊಂದಿರಬಾರದು." ನಾಯಕ ಮತ್ತು ಯಜಮಾನನಿಗಿರುವ ವ್ಯತ್ಯಾಸವನ್ನು ಈ ಕೆಳಗಿನ ಆಂಗ್ಲ ಮೂಲದ ಹೇಳಿಕೆಗಳು ಮನೋಜ್ಞವಾಗಿ ಚಿತ್ರಿಸುತ್ತವೆ:

ಯಜಮಾನರಾಗಬೇಡಿ, ನಾಯಕರಾಗಿ.
ಯಜಮಾನ ತನ್ನ ಜನರಿಂದ ಕೆಲಸ ಮಾಡಿಸುತ್ತಾನೆ,
ನಾಯಕ ಅವರನ್ನು ಹುರಿದುಂಬಿಸುತ್ತಾನೆ.
ಯಜಮಾನ ಯಾರು ತಪ್ಪುಗಾರನೆಂದು ತೋರಿಸುತ್ತಾನೆ,
ನಾಯಕ ತಪ್ಪೆಲ್ಲಿಹುದೆಂಬುದನ್ನು ಗುರುತಿಸುತ್ತಾನೆ.
ಯಜಮಾನ ಯಾವತ್ತೂ 'ನಾನು' ಎನ್ನುತ್ತಾನೆ,
ನಾಯಕ 'ನಾವು' ಎಂಬ ಭಾವನೆಯನ್ನು ಹೊಂದಿರುತ್ತಾನೆ.
ಯಜಮಾನ ಜನರನ್ನು ನಿಂದಿಸುತ್ತಾನೆ,
ನಾಯಕ ಅವರನ್ನು ಉಪಯೋಗಿಸಿಕೊಳ್ಳುತ್ತಾನೆ.
ಯಜಮಾನ ಗೌರವವನ್ನು ಬಯಸುತ್ತಾನೆ,
ನಾಯಕ ಗೌರವವನ್ನು ಅರ್ಹತೆಯಿಂದ ಹೊಂದುತ್ತಾನೆ.

*